**ಇಂದು ದಿನಾಂಕ 27.09.2025 ರಂದು ಪಿಡಬ್ಲ್ಯೂ -2 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದಃ**

**1.** ಸರ್ವೆ ನಂ.292 ನ್ನು ನನ್ನ ತಂದೆ ವೆಂಕಟಪ್ಪನವರು ಖರೀದಿ ಮಾಡಿರುವ ಬಗ್ಗೆ ಕ್ರಯಪತ್ರವನ್ನು ಹಾಜರು ಮಾಡಿಲ್ಲ. ಸರ್ವೆ ನಂ.259/ಪಿ16, 292 ಮತ್ತು 224 ಗೆ ಸಂಬಂಧಿಸಿದಂತೆ ಕ್ರಯಪತ್ರಗಳನ್ನು ಹಾಜರು ಮಾಡಿದ್ದೀರ ಎಂದರೆ ಅದರ ಬಗ್ಗೆ 2000 ಕ್ಕಿಂತ ಮೊದಲೇ ವಿಭಾಗವಾಗಿದೆ ಎನ್ನುತ್ತಾರೆ. ಸರ್ವೆ ನಂ.259/ಪಿ16, 292 ಮತ್ತು 224 ಗೆ ಸಂಬಂಧಿಸಿದಂತೆ ಕ್ರಯಪತ್ರಗಳು ಇವೆಯಾ ಎಂದರೆ ನೋಡಬೇಕು ಎನ್ನುತ್ತಾರೆ. ಈರಪ್ಪನ ಹೆಂಡತಿಯ ಹೆಸರು ಮಾರಕ್ಕ. ತಮ್ಮಣ್ಣನ ಹೆಂಡತಿಯ ಹೆಸರು ಗೊತ್ತಿಲ್ಲ. ತಮ್ಮಣ್ಣನ ಹೆಂಡತಿಯ ಹೆಸರು ಬೈಯ್ಯಮ್ಮ ಎಂದರೆ ಇರಬಹುದು ಎನ್ನುತ್ತಾರೆ. ತಮ್ಮಣ್ಣ ಮತ್ತು ಬೈಯ್ಯಮ್ಮನ ಹಿರಿಯ ಮಗ ಒಬ್ಬನೇ ಮಗ ಹನುಮಯ್ಯ ಎಂದರೆ ನಿಜ. ಹನುಮಯ್ಯನ ಅಕ್ಕ ಹನುಮಕ್ಕ. ಈರಪ್ಪನಿಗೆ ಬೇರೆ ಆಸ್ತಿಗಳು ಇವೆ. ಈರಪ್ಪನಿಗೆ ಮೂರು ಜನ ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು. ನಿಪಿ-52 ರಲ್ಲಿ ಕೆಂಪಮ್ಮನ ಮಗ ಹನುಮಯ್ಯ ಆ ವಿಲ್ ನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಕೆಂಪಮ್ಮ ಯಾರು ಎಂದರೆ ನನಗೆ ಗೊತ್ತಿಲ್ಲ. ಕೆಂಪಮ್ಮ ಈರಪ್ಪ ಮತ್ತು ತಮ್ಮಣ್ಣನ ವಂಶಕ್ಕೆ ಸಂಬಂಧಿಸಿಲ್ಲ ಎಂದರೆ ಗೊತ್ತಿಲ್ಲ. ಕೆಂಪಮ್ಮ ಹನುಮಯ್ಯನ ತಾಯಿ ಅಲ್ಲ ಎಂದರೆ ನಿಜ. ನಿಪಿ-52 ರ ಪ್ರಕಾರ ವೆಂಕಟಪ್ಪನಿಗೆ ಕೆಂಪಮ್ಮನ ಮಗ ಹನುಮಯ್ಯನವರು ಆಸ್ತಿಗಳನ್ನು ಬರೆದುಕೊಟ್ಟಿದ್ದಾರೆ ಸರಿಯಲ್ಲ. ನಿಪಿ-52 ನ್ನು ತಮ್ಮಣ್ಣ ಮತ್ತು ಹನುಮಯ್ಯನವರು ಬರೆದಿಲ್ಲ ಅವರ ಹೆಬ್ಬೆಟ್ಟು ಗುರುತು ಇಲ್ಲ ಸಹಿ ಇಲ್ಲ ಎಂದರೆ ಇದೆ ಎನ್ನುತ್ತಾರೆ. ನಿಪಿ-52 ನ್ನು 1952 ರಲ್ಲಿ ಬರೆದುಕೊಡುವಾಗ ನನ್ನ ತಂದೆ ವೆಂಕಟಪ್ಪನಿಗೆ ಎಷ್ಟು ವಯಸ್ಸು ಎಂದರೆ ಗೊತ್ತಿಲ್ಲ. ನಿಪಿ-52 ಕ್ಕೆ ಸಾಕ್ಷಿಯಾಗಿ ಯಾರು ಸಹಿ ಮಾಡಿದ್ದಾರೆ ಎಂದು ಗೊತ್ತಿಲ್ಲ. ನಾನು ಸಹಿ ಮಾಡಿರುವುದನ್ನು ನೋಡಿಲ್ಲ ಆ ದಾಖಲೆಯಲ್ಲಿ ಶಾನುಭೋಗ ನಾರಾಯಣರಾವ್ ಮತ್ತು Jahangir Sabi ಎಂದು ಇದೆ. ಶಾನುಭೋಗ ನಾರಾಯಣರಾವ್ ಮತ್ತು Jahangir Sabi ಪರಿಯಚವಿಲ್ಲ. ಬೆಟ್ಟಹಳಸೂರು ಸುಬ್ಬರಾಯಪ್ಪ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ 2 ನೇ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಕಾಲಾವಕಾಶ ನೀಡಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**

**ದೇವನಹಳ್ಳಿ.**